# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 857 |
| ಸದಸ್ಯರ ಹೆಸರು | : | ಡಾ: ಆರತಿ ಕೃಷ್ಣ (ನಾಮ ನಿರ್ದೇಶಿತರು) |
| ಉತ್ತರಿಸುವ ದಿನಾಂಕ | : | 11-03-2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಚಿಕ್ಕಮಗಳೂರು-ದಕ್ಷಿಣ ಕನ್ನಡ ಸಂಪರ್ಕಿಸುವ ಚಾರ್ಮಾಡಿ ಘಾಟ್ ರಸ್ತೆಯಲ್ಲಿ ಸರಣಿ ಲಾರಿ ಅಪಘಾತಗಳು (ಗ್ಯಾಸ್ ಲಾರಿಗಳು ಚಾಲಕನ ನಿಯಂತ್ರಣ ತಪ್ಪಿ ತಿರುವಿನಲ್ಲಿ ಪಲ್ಟಿಯಾಗುವುದು ಸೇರಿ) ಸಂಭವಿಸುತ್ತಿದ್ದು, ರಾಷ್ಟ್ರೀಯ ಹೆದ್ದಾರಿ-173 ರಲ್ಲಿ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡು, ಹಲವು ಬಾರಿ ಕಿ.ಮೀಟರ್‌ಗಟ್ಟಲೆ ಸಂಚಾರ ಸ್ಥಗಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಚಿಕ್ಕಮಗಳೂರು-ದಕ್ಷಿಣ ಕನ್ನಡ ಜಿಲ್ಲೆ ರಾಷ್ಟ್ರೀಯ ಹೆದ್ದಾರಿ-73 ರ ಚಾರ್ಮಾಡಿ ಘಾಟ್ ಭಾಗವು ಕಿ.ಮೀ 75.00 ರಿಂದ 99.200 ವರೆಗಿದ್ದು, ಕಿ.ಮೀ.75.00 ರಿಂದ 86.20 (ಚಾರ್ಮಾಡಿಘಾಟ್ ರಸ್ತೆಯ 11ನೇ ತಿರುವು) ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಗೆ ಹಾಗೂ ಕಿ.ಮೀ. 86.200 ರಿಂದ 99.200ರ ವರೆಗೆ ಚಿಕ್ಕಮಗಳೂರು ಜಿಲ್ಲಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಸದರಿ ರಸ್ತೆಯ ಭಾಗವು ಅತ್ಯಂತ ಕಿರಿದಾಗಿರುವುದರಿಂದ ರಸ್ತೆ ಸುರಕ್ಷತಾ ಹಿತದೃಷ್ಟಿಯಿಂದ ಜಿಲ್ಲಾಧಿಕಾರಿಗಳ ಆದೇಶದಂತೆ ಸದರಿ ಭಾಗದಲ್ಲಿ 6 ಕ್ಕಿಂತ ಹೆಚ್ಚು ಚಕ್ರಗಳ ವಾಹನ ಸಂಚಾರವನ್ನು ನಿಷೇಧಿಸಲಾಗಿರುತ್ತದೆ. ಕೇವಲ ಸಾರ್ವಜನಿಕರು ಸಂಚರಿಸುವ ಕೆಎಸ್.ಆರ್.ಟಿ.ಸಿ. ಕೆಂಪು ಬಸ್, ಆರು ಚಕ್ರದ ಲಾರಿ, ನಾಲ್ಕು ಚಕ್ರದ ವಾಹನಗಳು, ಟೆಂಪೋಟ್ರಾವೆಲರ್, ಕಾರು, ಜೀಪು, ವ್ಯಾನ್, ಮಿನಿವ್ಯಾನ್, ದ್ವಿಚಕ್ರ ವಾಹನಗಳಿಗೆ ಮಾತ್ರ ಸಂಚಾರ ಅನುಮತಿಸಲಾಗಿರುತ್ತದೆ. |
| ಆ) | ಈ ರಸ್ತೆಯಲ್ಲಿನ ಅಪಘಾತಗಳು ಹಾಗೂ ಸಂಚಾರಿ ಸಮಸ್ಯೆಯನ್ನು ಶಾಶ್ವತ ಹಾಗೂ ವೈಜ್ಞಾನಿಕವಾಗಿ ಸಾರ್ವಜನಿಕ ಹಿತದೃಷ್ಟಿಯಿಂದ ಪರಿಹರಿಸಲು ಸರ್ಕಾರ ಯಾವ ಕ್ರಮಕೈಗೊಳ್ಳುತ್ತಿದೆ? (ವಿವರಗಳನ್ನು ನೀಡುವುದು) | ರಾಷ್ಟ್ರೀಯ ಹೆದ್ದಾರಿ-73 ರಲ್ಲಿ ಕಿ.ಮೀ.75.00 ರಿಂದ 86.200 ರ ಸರಪಳಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾದು ಹೋಗುತ್ತಿದ್ದು, ಸದರಿ ರಸ್ತೆಯು ಮಧ್ಯಮ ಪಥ Intermediate Lane) ರಸ್ತೆಯಾಗಿರುತ್ತದೆ. ಸದರಿ ಸರಪಳಿಯಲ್ಲಿ 11 ಹೇರ್‌ಪಿನ್ ತಿರುವುಗಳಿದ್ದು, ಪ್ರಸ್ತುತ 2023-24ನೇ ಸಾಲಿನಲ್ಲಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯ, ನವದೆಹಲಿ ಇವರಿಂದ ಸಂಚಾರ ಸಮಸ್ಯೆಯನ್ನು ಪರಿಹರಿಸಲು ಮಧ್ಯಮಪಥದಿಂದ ದ್ವಿಪಥ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಕಾಮಗಾರಿಯು ರೂ. 343.74 ಕೋಟಿ ಮೊತ್ತಗಳಿಗೆ ಅನುಮೋದನೆ ಗೊಂಡಿರುತ್ತದೆ. ದಿನಾಂಕ: 16.01.2025 ರಲ್ಲಿ ಮೆ:: ಎಸ್.ಎಲ್.ವಿ ಅರ್ಥ್ ಮೂವರ್ಸ್ ಪ್ರೈವೇಟ್ ಲಿಮಿಟೆಡ್, ಚಿಕ್ಕಮಗಳೂರು ಇವರಿಗೆ ಟೆಂಡರ್ ಆಧಾರದ ಮೇಲೆ ಗುತ್ತಿಗೆ ವಹಿಸಿಕೊಡಲಾಗಿರುತ್ತದೆ.<br><br>ರಾಷ್ಟ್ರೀಯ ಹೆದ್ದಾರಿ-73 ರಲ್ಲಿ ಕಿ.ಮೀ. 86.200 ರಿಂದ 99.200ರ ರಸ್ತೆಯು ಮಧ್ಯಮ ಪಥ Intermediate |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| | | Lane) ರಸ್ತೆಯಾಗಿದ್ದು, ಯಾವುದೇ ಹೇರ್ ಪಿನ್ ತಿರುವುಗಳು ಇರುವುದಿಲ್ಲ. ಪ್ರಸ್ತುತ 2025-26ನೇ ಸಾಲಿನಲ್ಲಿ 10 ಮೀಟರ್‌ಗೆ (Two lane paved shoulder) ಅಗಲೀಕರಣಗೊಳಿಸುವ ಯೋಜನೆಗೆ ಸಮಗ್ರ ಯೋಜನಾ ವರದಿಯನ್ನು (ಡಿಪಿಆರ್) ತಯಾರಿಸಲು M/s K&J projects private limited ರವರನ್ನು ಸಮಾಲೋಚಕರನ್ನಾಗಿ ನೇಮಿಸಲಾಗಿದ್ದು, ಪ್ರಸ್ತುತ ಸರ್ವೆ ಕೆಲಸ ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ಲೋಇ 168 ಸಿಎನ್‌ಹೆಚ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು